# ಖಾಲ್ಸಾತತ್ತ್ವದ ಸಂಧಾನದಲ್ಲಿ

**ಸ್ವಾಮಿ ಸುನಿರ್ಮಲಾನಂದ**

ಖಾಲ್ಸಾತತ್ತ್ವದ ಆಧ್ಯಾತ್ಮಿಕ ಸಂಕೇತವನ್ನು ವಿವರಿಸಿರುವ ಸ್ವಾಮಿ ಸುನಿರ್ಮಲಾನಂದರು ರಾಮಕೃಷ್ಣಮಹಾಸಂಘದ ಆಂಗ್ಲ ಮಾಸಪತ್ರಿಕೆಯಾದ "ಪ್ರಬುದ್ಧ ಭಾರತ"ದ ಸಂಪಾದಕರಾಗಿದ್ದರು. ಈಗ ಸಂಘದ ಪ್ರಧಾನ ಕೇಂದ್ರದಲ್ಲಿರುವ ಬ್ರಹ್ಮಚಾರಿಗಳ ತರಬೇತಿ ಕೇಂದ್ರದಲ್ಲಿ ಆಚಾರ್ಯರಾಗಿ ಸೇವೆ ಸಲ್ಲಿಸುತ್ತಿರುವರು.

## ಧರ್ಮಕ್ಕಾಗಿ ಬಲಿದಾನ

"ನನಗೊಂದು ತಲೆ ಬೇಕು! ತಲೆ ನೀಡಲು ಯಾರು ಸಿದ್ಧರಾಗಿದ್ದೀರಿ?" ಸಿಡಿಲಿನಂತೆ ಗುರುಗೋವಿಂದ ರಾಯನ ದನಿ ನೆರೆದಿದ್ದ ೮೦ ಸಹಸ್ರ ಮಂದಿಯ ಕಿವಿ ಮುಟ್ಟಿತ್ತು. ಎಲ್ಲರೂ ಸ್ತಬ್ಧರಾದರು. ಉತ್ತರ ನೀಡಲು ಯಾರೂ ಸಿದ್ಧರಾದಂತೆ ಕಾಣಲಿಲ್ಲ. "ಹ್ಞು! ಯಾರು ಸಿದ್ಧರಾಗಿದ್ದೀರಿ ಹೇಳಿ, ಧರ್ಮಕ್ಕಾಗಿ ಬಲಿದಾನ ನೀಡಲು! ಮುಂದೆ ಬನ್ನಿ!" ಗುರು ಗೋವಿಂದ ರಾಯ್ ಮತ್ತೆ ಕರೆ ನೀಡಿದರು. ಎಲ್ಲರೂ ಆಶ್ಚರ್ಯದಿಂದ ನೋಡುತ್ತಿದ್ದಂತೆ ದಯಾರಾಮ ಎದ್ದು ನಿಂತು "ಓ ಗುರೂಜೀ! ನಾನು ತಯಾರಾಗಿದ್ದೇನೆ!" ಎಂದನು.



ಗುರು ಗೋವಿಂದರಾಯರು ಆತನನ್ನು ಒಂದು ಬಿಡಾರದ ಒಳಗೆ ಕರೆದೊಯ್ದರು. ಇದ್ದಕ್ಕಿದ್ದ ಹಾಗೆ "ಆಹ್!" ಎಂಬ ಚೀತ್ಕಾರ ಕೇಳಿ ಬಂತು ಬಿಡಾರದ ಒಳಗಿನಿಂದ. ನೆರೆದಿದ್ದ ಸಹಸ್ರಾರು ಮಂದಿ ಬೆಚ್ಚಿ ಬಿದ್ದರು. ಏನಾಯಿತೋ ಎಂದು ಅವರೆಲ್ಲ ಕಾತರದಿಂದ ನೋಡುತ್ತಿದ್ದಂತೆ ಹಠಾತ್ತಾಗಿ ಗುರು ಗೋವಿಂದ ರಾಯರು ಬಿಡಾರದ ಹೊರಗೆ ಬಂದರು. "ಮತ್ತಾರು ಸಿದ್ಧರಿದ್ದೀರಿ ಬಲಿದಾನ ನೀಡಲು?" ಎಂದು ಅವರು ಕೇಳಿದಾಗ ಜನರು ಅವರ ಕೈಯಲ್ಲಿದ್ದ ರಕ್ತಸಿಕ್ತ ಖಡ್ಗವನ್ನೇ ನೋಡುತ್ತಿದ್ದರು. ಹಾಗಾದರೆ ದಯಾರಾಮ ಇನ್ನಿಲ್ಲವೇ ಎಂದು ಚಿಂತಿಸುತ್ತಿದ್ದರು. ಅಷ್ಟರಲ್ಲಿ ಮತ್ತೊಬ್ಬ ತಲೆಗೊಡಲು ಸಿದ್ಧನಾದ. ಒಂದು, ಎರಡು, ಮೂರು, ನಾಲ್ಕು, ಐದು—ಐದು ಮಂದಿ ಬಿಡಾರದ ಒಳಹೊಕ್ಕಿದ್ದರು. ಕೇವಲ ಚೀತ್ಕಾರವೊಂದೇ ಕೇಳಿಸಿತ್ತು ಪ್ರತಿಬಾರಿಯೂ. ನೆರೆದ ಜನಸಾಗರಕ್ಕೆ ಒಂದೇ ಚಿಂತೆ : "ಏನಿದು? ಏನಾಗುತ್ತಿದೆ?"

ಆನಂದಪುರದಲ್ಲಿ ನೆರೆದಿದ್ದ ಈ ವಿಶಾಲ ಜನಸ್ತೋಮ ದುಃಖದ ನಾಟಕ ನೋಡುತ್ತಿದ್ದೇವೆಂದು ಭಾವಿಸಿದ್ದರು. ಆದರೆ ಕೆಲವೇ ನಿಮಿಷಗಳಲ್ಲಿ ದೃಶ್ಯ ಬದಲಾಯಿತು. ಬಲಿದಾನ ನೀಡಿದ ಐವರೂ ಬಿಡಾರದಿಂದ ಹೊರಗೆ ಬಂದಾಗ ೮೦ ಸಾವಿರ ಜನರು ಒಂದಾಗಿ ಹರ್ಷೋದ್ಗಾರ ಮಾಡಿದರು.

"ಈ ಐವರು ಧರ್ಮಕ್ಕಾಗಿ ಬಲಿದಾನ ಮಾಡಲು ಸಿದ್ಧರಿದ್ದಾರೆ! ಇವರು ನನ್ನ ಐವರು ಪ್ರಾಣಪ್ರಿಯರು. ಇವರೊಂದಿಗೆ ಪ್ರಾರಂಭವಾಗಲಿದೆ ಒಂದು ನವೀನ ಪಂಥ. ಅದೇ ಖಾಲ್ಸಾ."

ಗುರು ಗೋವಿಂದ ರಾಯರ ಉಚ್ಚಕಂಠದ ಘೋಷಣೆ ಸಾಗಿತ್ತು: "ಇನ್ನು ಮುಂದೆ ನಾವೆಲ್ಲರೂ ಸೋದರರು. ನಮಗಾವ ಜಾತಿ ಮತವೂ ಇಲ್ಲ. ನಾವೆಲ್ಲರೂ ಒಂದೇ. ನಮ್ಮೆಲ್ಲರ ಪದವಿಯೂ ಇಂದಿನಿಂದ ಒಂದೇ. ನಾವೆಲ್ಲರೂ ಕುರಿಗಳಲ್ಲ, ಸಿಂಹಗಳು. ಹಾಗಾಗಿ, ನಮ್ಮ ಪದವಿ 'ಸಿಂಹ'ವಾದರೆ, ಹೆಂಗಸರ ಪದವಿ 'ಕೌರ್' ಆಗುತ್ತದೆ."

## ಧರ್ಮದೀಕ್ಷೆ

ಎರಡು ಬದಿಯಲ್ಲೂ ಹರಿತವಾದ ಕತ್ತಿಯನ್ನು ಅಮೃತದಲ್ಲಿ ಅದ್ದಿ ಅದನ್ನು ಆ ಐದು ಮಂದಿಯ ಬಾಯಿಗೆ ಚುಮುಕಿಸಿದಾಗ ದೀಕ್ಷೆಯಾಗಿತ್ತು. ಈ ಕತ್ತಿಯ ದೀಕ್ಷೆಯೇ ಖಂಡೇ ಡಿ ಪಹೂಲ್. ಗುರು ಗೋವಿಂದ ರಾಯ್‌ರ ಧರ್ಮಪತ್ನಿ ಸಮಯೋಚಿತವಾಗಿ, "ತಮ್ಮ ಖಾಲ್ಸಾ ಪಂಥವು ಕತ್ತಿಯಂತೆ ಒಂದೆಡೆ ಬಲಯುತವಾಗಿದ್ದರೆ ಮತ್ತೊಂದೆಡೆ ಮಧುರವಾಗಿಯೂ ಇರಲಿ" ಎಂದು ಹೇಳಿ ಆ ಅಮೃತದ ಪಾತ್ರೆಯಲ್ಲಿ ಕಲ್ಲುಸಕ್ಕರೆ ಹಾಕಿದರು. ಈ ಪಾವನ ಅಮೃತವನ್ನು ಪಾನಮಾಡಿದ ಆ ಐದು ಮಂದಿ "ಅಮೃತಸ್ಯ ಪುತ್ರಾಃ" ಆದರು, ಸಿಂಹಗಳಾದರು.

ಜನರೆಲ್ಲರೂ ಆಶ್ಚರ್ಯದಿಂದ ನೋಡುತ್ತಿದ್ದಂತೆ ಗುರು ಗೋವಿಂದರಾಯರು ಆ ಐವರ ಪದತಲದಲ್ಲಿ ಶರಣಾದರು! "ಇದೇನು! ಇದೇನು! ಗುರುಗಳು ಹೀಗೆ ಮಾಡುವುದೇ?" ಎಂದು ಎಲ್ಲರೂ ಹೇಳಿಕೊಳ್ಳುತ್ತಿದ್ದಂತೆಯೇ ಗುರು ಗೋವಿಂದರಾಯರು ಹೇಳಿದರು: "ನಾನಾಗಲೇ ಹೇಳಿದೆ; ಈ ವಿನೂತನ ಖಾಲ್ಸಾ ಪಂಥ ದಲ್ಲಿ ಜಾತಿ ಮತ, ಹಿರಿಯ ಕಿರಿಯ ಭೇದವಿಲ್ಲ ಎಂದು. ಹಾಗಾಗಿ, ಈಗ ನಾನೂ ನಿಮ್ಮಿಂದ ದೀಕ್ಷೆ ಪಡೆಯುತ್ತೇನೆ. ಇನ್ನು ಮುಂದೆ ಗುರು ಇರುವುದಿಲ್ಲ. ಧರ್ಮಗ್ರಂಥವೇ ಗುರು." ಗೋವಿಂದರಾಯರ ದೀಕ್ಷೆಯಾಯಿತು. ಈಗವರು ಗುರು ಗೋವಿಂದ ಸಿಂಹರಾದರು.

ಖಾಲ್ಸಾದ ನಿಯಮಗಳನ್ನು ಅನಂತರ ಗುರು ಗೋವಿಂದ ಸಿಂಹರು ನೆರೆದಿದ್ದ ಜನರಿಗೆ ತಿಳಿಸಿದರು. "ಪ್ರತಿದಿನ ಬೆಳಿಗ್ಗೆ ಬೇಗನೆದ್ದು ಪ್ರಾರ್ಥನೆ ಮಾಡಬೇಕು. ಕೆಲವು ನಿರ್ಧಾರಿತ ಪ್ರಾರ್ಥನೆಗಳಿವೆ, ಅವುಗಳನ್ನು ಉಚ್ಚರಿಸಬೇಕು. ನಂತರ ಜೀವನ ದಲ್ಲಿ ಸತ್ಯ, ಶಾಂತಿ, ನೀತಿಗಳನ್ನು ಪಾಲಿಸಬೇಕು ಮತ್ತು ಎಲ್ಲ ಖಾಲ್ಸಾ ಪಂಥಿಗಳೂ ಐದು 'ಕ'ಗಳನ್ನು ಧರಿಸಬೇಕು. ಆ ಐದು ಕಕಾರಗಳೆಂದರೆ, ಕೇಶ, ಕಂಗ, ಕೃಪಾಣ, ಕಚ್ಚೆ ಮತ್ತು ಕರ್ಹಾ. ಖಾಲ್ಸಾ ಅನುಯಾಯಿಗಳಿಗೆ ಜಾತಿ ಮತ ಭೇದವಿಲ್ಲ. ಎಲ್ಲರೂ ಒಟ್ಟಾಗಿ ಊಟಮಾಡಬೇಕು, ಅದೇ ಲಂಗರ್ ಪದ್ಧತಿ..."

ಹೀಗೆ ಮುನ್ನೂರು ವರ್ಷಗಳ ಹಿಂದೆ, ೩೦ ಮಾರ್ಚ್ ೧೬೯೯ರಂದು ಖಾಲ್ಸಾದ ಪ್ರತಿಷ್ಠಾಪನೆಯಾಯಿತು.

## ದೇಶ ಮತ್ತು ಧರ್ಮದ ರಕ್ಷಣೆ

ಖಾಲ್ಸಾದ ಮೂಲ ಉದ್ದೇಶವೇನು? ಭಾರತದ ಇತಿಹಾಸ ವೆಂದರೆ ದುಃಖದ ಇತಿಹಾಸ. ಭಾರತೀಯರ ಸರಳತೆ, ಮೃದು ಸ್ವಭಾವ, ಸಹನೆ ಇವುಗಳನ್ನು ದುರುಪಯೋಗ ಮಾಡಿಕೊಂಡು ನಾನಾದೇಶದ ನಾನಾ ಮತಗಳ ಜನರು ಆಕ್ರಮಣ ಮಾಡಿ, ಭಾರತದ ಸಂಪತ್ತನ್ನು ಲೂಟಿ ಮಾಡಿ ಜನರನ್ನು ನಿರ್ದಯವಾಗಿ ಕೊಂದು ಹೋಗುತ್ತಿದ್ದರು. ಗುರುಗೋವಿಂದ ಸಿಂಹರ ತಂದೆ ಯವರೂ ವಿದೇಶೀ ಆಕ್ರಮಣಕ್ಕೆ ಬಲಿಯಾಗಿದ್ದರು. ಅವರು ಸಿಖ್ (ಶಿಷ್ಯ) ಸಂಪ್ರದಾಯದ ನವಮ ಗುರುಗಳಾಗಿದ್ದರು. ಸಾವಿರ ಸಾವಿರ ಮಂದಿ ಪಶುಗಳಂತೆ ಲಂಪಟರ, ದುರಾಚಾರಿಗಳ ದುಷ್ಟ ತನಕ್ಕೆ ಬಲಿಯಾಗುತ್ತಿದ್ದರು. ಇಂತಹ ಸ್ಥಿತಿಯಲ್ಲಿ ಭಾರತದ ಧರ್ಮಕ್ಕೇ ಕುಠಾರಾಘಾತ ಬೀಳುವ ಪರಿಸ್ಥಿತಿ ಬಂದಿತ್ತು. ಭಾರತದ ರಾಜಮಹಾರಾಜರುಗಳು ಇರಲಿಲ್ಲವೆಂದಲ್ಲ. ಅವರಲ್ಲಿ ಕೆಲವರಿ ಗಾದರೂ ಪೌರುಷವಿರಲಿಲ್ಲ ಎಂದಲ್ಲ. ಆದರೆ ಸಮಸ್ಯೆ ಏನೆಂದರೆ ಅವರುಗಳು ಪರಸ್ಪರ ಕಾದಾಡುವುದರಲ್ಲಿಯೇ ವ್ಯಸ್ತರಾಗುತ್ತಿದ್ದರು. ತಮ್ಮೊಳಗಿನ ಜಗಳಗಳನ್ನು ಬಿಡಿಸಲು ವಿದೇಶೀಯರಿಗೆ ಆಹ್ವಾನ ನೀಡುತ್ತಿದ್ದರು. ಈ ಪರಿಸ್ಥಿತಿ ಇಂದಿಗೂ ನಡೆದಿದೆ. ಹಿಂದೂ ಜಾತಿಯ ಅವಸ್ಥೆ ನೋಡಿ ! ಯಾರಾದರೂ ಒಂದು ಒಳ್ಳೆಯ ಕೆಲಸ ಮಾಡಲು ಹೊರಟರೆಂದರೆ ಹಿಂದೂಗಳೇ ಮೊಟ್ಟಮೊದಲು ಅದನ್ನು ವಿರೋಧಿಸುವುದು!

ಪರಿಸ್ಥಿತಿ ಹದಗೆಟ್ಟಾಗ, ದೇಶ ಗುಲಾಮಗಿರಿಗೆ ತಳ್ಳಲ್ಪಟ್ಟಾಗ ದಶಮಗುರು ಗೋವಿಂದ ಸಿಂಹರು ಪರಿಸ್ಥಿತಿಯನ್ನು ಬದಲಿಸಲು ನಿರ್ಧರಿಸಿದರು. ಆ ನಿರ್ಧಾರದ ಪರಿಣಾಮವೇ ಆನಂದಪುರ ಸಾಹೀಬ್‌ನಲ್ಲಿ ಅಂದಿನ ವಿಶಾಲ ಜನಸಂದಣಿ, ಖಾಲ್ಸಾದ ಸ್ಥಾಪನೆ. ಮೊದಲು ಐವರು ಖಾಲ್ಸಾಪಂಥಿಗಳಾದ ನಂತರ ಅಲ್ಲಿ ನೆರೆದಿದ್ದ ಸಹಸ್ರಾರು ಮಂದಿ ಕಂಕಣಬದ್ಧರಾದರು.

> ಗುರುಗೋವಿಂದ ಸಿಂಹರು ಮಣ್ಣಿನ ಮುದ್ದೆಗಳಿಂದ ವೀರಯೋಧರನ್ನು ಸೃಷ್ಟಿಸಿದರು. ಗುಬ್ಬಚ್ಚಿಗಳನ್ನು ರಣ ಹದ್ದುಗಳಾಗಿ ಪರಿವರ್ತಿಸಿದರು. ಕುರಿಗಳನ್ನುಸಿಂಹಗಳಾಗಿ ಮಾಡಿದರು.
> — ಡಾ. ರಾಧಾಕೃಷ್ಣನ್

ಇವರ ಪ್ರಧಾನಕಾರ್ಯವೇನು? ಧರ್ಮದ ರಕ್ಷಣೆಯೊಂದಿಗೆ ದೇಶದ ರಕ್ಷಣೆ. ಭಾರತದ ಸನಾತನ ಧರ್ಮದ ತಳಹದಿಗೇ ಬೀಳುತ್ತಿದ್ದ ಏಟುಗಳಿಂದ ಅದನ್ನು ರಕ್ಷಿಸಬೇಕಿತ್ತು. ಆದರೆ ಆ ರಕ್ಷಣೆ ಕೇವಲ ಭಕ್ತಿಯಿಂದ, ಕೇವಲ ಮಂತ್ರ ತಂತ್ರಗಳಿಂದ, ಕೇವಲ ಕೆಲವೊಂದು ರೀತಿನೀತಿಗಳ ಪಾಲನೆಯಿಂದ ಆಗುವಂತಹು ದಲ್ಲ. ಕ್ಷಾತ್ರವೀರ್ಯ ಬೇಕು. ಹೀಗೆ ಭಾರತದಲ್ಲಿ ಕ್ಷಾತ್ರವೀರ್ಯ ಮತ್ತು ಬ್ರಹ್ಮತೇಜಗಳ ಸಮನ್ವಯವನ್ನು ಮೊಟ್ಟಮೊದಲು ಮಾಡಿದ ಕೀರ್ತಿ ಗುರುಗೋವಿಂದ ಸಿಂಹರಿಗೆ ಸಲ್ಲಬೇಕು. ಕುರಿ ಗಳಂತಿದ್ದ ಜನತೆಗೆ, "ನೀವು ಕುರಿಗಳಲ್ಲ, ಸಿಂಹಗಳು" ಎಂದು ಮೊಟ್ಟಮೊದಲು ಹೇಳಿದವರು ಗುರುಗೋವಿಂದ ಸಿಂಹರು. ಡಾ.ರಾಧಾಕೃಷ್ಣನ್ ಅವರ ಮಾತುಗಳಲ್ಲಿ "ಗುರುಗೋವಿಂದ ಸಿಂಹರು ಮಣ್ಣಿನ ಮುದ್ದೆಗಳಿಂದ ವೀರಯೋಧರನ್ನು ಸೃಷ್ಟಿಸಿದರು. ಗುಬ್ಬಚ್ಚಿಗಳನ್ನು ರಣಹದ್ದುಗಳಾಗಿ ಪರಿವರ್ತಿಸಿದರು. ಕುರಿಗಳನ್ನು ಸಿಂಹಗಳಾಗಿ ಮಾಡಿದರು."

## ಖಾಲ್ಸಾದ ಸಾಂಕೇತಿಕ ಅರ್ಥ

ಹಾಗಾದರೆ ಗುರುಗೋವಿಂದ ಸಿಂಹರು ಒಬ್ಬ ಸೈನ್ಯ ನಿರ್ಮಾಣ ಮಾಡಿದ ಯೋಧರೇ? ಅವರು ಧರ್ಮಗುರು ಗಳಲ್ಲವೇ? ಧರ್ಮಕ್ಕಾಗಿ ತಮ್ಮ ನಾಲ್ವರು ರತ್ನದಂಥಾ ಪುತ್ರ ರನ್ನು ಬಲಿಕೊಟ್ಟ ಗುರು ಗೋವಿಂದ ಸಿಂಹರ ಕಾರ್ಯ ಅಂದೇ ಮುಕ್ತಾಯವಾಯಿತೇ? ಇಂದು ಖಾಲ್ಸಾದ ಪ್ರಯೋಜನವೇನು? ಖಾಲ್ಸಾದ ಹಿಂದೆ ಏನಾದರೂ ಆಧ್ಯಾತ್ಮಿಕ ತತ್ತ್ವವಿದೆಯೇ? ಇದ್ದೇ ಇರಬೇಕು. ಇಲ್ಲವಾದರೆ, ಗುರುಗೋವಿಂದ ಸಿಂಹರು ಧರ್ಮಗುರುಗಳಾಗುತ್ತಿರಲಿಲ್ಲ. ಹಾಗಾಗಿ, ಖಾಲ್ಸಾ ಪಂಥದ ಆಧ್ಯಾತ್ಮಿಕ ದಿಕ್ಕನ್ನು ನೋಡಬೇಕು.

ಖಾಲ್ಸಾ ಪಂಥದ ಪ್ರತಿಷ್ಠಾಪನೆಯ ಬಗ್ಗೆ ಓದಿದೆವು. ಗುರು ಗೋವಿಂದ ಸಿಂಹರು ಹೇಗೆ ಐದು ಮಂದಿಗೆ ಮೊದಲು ದೀಕ್ಷೆ ನೀಡಿದರೆಂಬುದನ್ನು ನೋಡಿದೆವು. ಇದೇನು ನಾಟಕ ಎನಿಸ ಬಹುದು. ಸುಮ್ಮನೆ ಧರ್ಮದ ಭಿತ್ತಿ ಹೇಳಿ, ಹೊಸ ಬಟ್ಟೆ ತೊಡಿಸಿ ದೀಕ್ಷೆ ನೀಡಬಹುದಾಗಿತ್ತು. ಏಕೆ ಈ ಖಡ್ಗದ ಪ್ರಯೋಗ, ಏಕೆ ಈ ಐದು ಜನರ "ಕೊಲ್ಲುವಿಕೆ"?

ಈ ಐದು ಜನರನ್ನು "ಕೊಲ್ಲುವುದರ" ಹಿಂದೆ ಅರ್ಥವಿದೆ. ನಮ್ಮ ಇಂದ್ರಿಯಗಳು ಐದು—ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ. ಈ ಐದು ಇಂದ್ರಿಯಗಳೇ ನಮ್ಮ ಎಲ್ಲ ತೊಂದರೆಗಳ ಮೂಲ. ಕಠೋಪನಿಷತ್ತು ಹೇಳುವಂತೆ ಈ ಇಂದ್ರಿಯಗಳ ಸ್ವಭಾವವೇ ಹೊರಗಿನೆಡೆಗೆ ಓಡುವುದು. ಹೊರಗಿನೆಡೆ ಎಂದರೆ ಜಗತ್ತಿನ ಆಕರ್ಷಣೆಗಳ ಕಡೆಗೆ. ಈ ಹೊರಮುಖಿ ಇಂದ್ರಿಯಗಳಿಂದಾಗಿ ಒಳಗಿರುವ ಮಹಾಶಕ್ತಿಯ ಕಡೆಗೆ ಲಕ್ಷ್ಯವಿರುವುದಿಲ್ಲ. ಉಪನಿಷತ್ತು ಹೇಳುವಂತೆ ಯಾರೋ ಒಬ್ಬ ವಿವೇಕವುಳ್ಳ ವ್ಯಕ್ತಿ ಅಮರನಾಗಲು ಬಯಸಿ ಇಂದ್ರಿಯಗಳನ್ನು ಅಂತರ್ಮುಖಿಗೊಳಿಸುತ್ತಾನೆ. ಈ ಬಹಿರ್ಮುಖೀ ಇಂದ್ರಿಯಗಳನ್ನು ವಶಕ್ಕೆ ತರಲು ಅಥವಾ ಅವುಗಳ ಬಹಿರ್ಮುಖತೆಯನ್ನು ನಾಶಮಾಡಲು, ಮತ್ತು ಅವುಗಳನ್ನು ಅಂತರ್ಮುಖಿಗಳಾಗಿ ಮಾಡಲು ಗುರು ಗೋವಿಂದ ಸಿಂಹರು ಈ ಬೃಹತ್ ನಾಟಕವಾಡಿದರು. ಐದು ಜನರ "ಶಿರಚ್ಛೇದನ" ಮಾಡಿದರು. ಅವರಿಗೆ ನವಜೀವನವಿತ್ತರು. ಅವರ "ಕುರಿ"ತನವನ್ನು ಕೊಂದು "ಸಿಂಹ" ತನವನ್ನು ಜಾಗೃತಗೊಳಿಸಿದರು. ಈ ಸಿಂಹತನ ಎಂದರೇನು? ಒಳಗೆ ನಿದ್ರಿಸಿರುವ ಅಧ್ಯಾತ್ಮ ಶಕ್ತಿ. ಈ ಶಕ್ತಿಗೆ ಸೀಮೆ ಎಂಬುದಿಲ್ಲ. ಇದು ಆಕಾಶದಷ್ಟೇ ಅನಂತವಾದುದು. ಅದಕ್ಕೆಂದೇ ಆ ಐವರಿಗೆ ನೀಲವಸ್ತ್ರಗಳನ್ನು ನೀಡಿದುದು!

### ಪಂಚ "ಕ "ಕಾರಗಳ ಅರ್ಥ

ಈಗ ಖಾಲ್ಸಾದ ಮತ್ತೊಂದು ಪ್ರಧಾನ ಅಂಗವಾದ ಪಂಚ "ಕ"ಕಾರಗಳ ವಿಶ್ಲೇಷಣೆ ಮಾಡೋಣ. ಮೊದಲ "ಕ" ಕೇಶ. ಪುರುಷರೂ ದೀರ್ಘಕೇಶಿಗಳಾಗಬೇಕೆಂಬುದು ಗುರುಗೋವಿಂದ ಸಿಂಹರ ಉದ್ದೇಶವಾಗಿತ್ತು. ಕೂದಲನ್ನು ಕತ್ತರಿಸಬೇಡಿ ಎಂದರು. ಏಕೆ? ಕೇಶವು ನಮ್ಮ ಪ್ರಾಚೀನ ಋಷಿಮುನಿಗಳೊಂದಿಗಿನ ನಮ್ಮ ಸಂಬಂಧದ ದ್ಯೋತಕ. ಬ್ರಹ್ಮಚಾರಿಯೊಬ್ಬನನ್ನು ನೋಡಿ. ಅವನಲ್ಲಿ ಶಿಖಾ ಸೂತ್ರಗಳಿರುತ್ತವೆ. ಈ ಶಿಖಾಸೂತ್ರಗಳನ್ನು ತ್ಯಜಿಸಿದಾಗ ಅವನು ನಿಸ್ಸಂಗ ಸಂನ್ಯಾಸಿಯಾಗುತ್ತಾನೆ. ಶಿಖೆ ಎಂಬುದು ವಂಶಪರಂಪರೆಯ ಸಂಕೇತ. ಸೂತ್ರವೆಂಬುದು ವಂಶಾನುಗತ ಧರ್ಮಪಾಲನೆ ಮಾಡಲು ಸಾಮಾಜಿಕ ಅನುಮೋದನೆ. ಸಂನ್ಯಾಸಿಗೆ ಕರ್ತವ್ಯವಿಲ್ಲ, ವಂಶದೊಂದಿಗೆ ಸಂಪರ್ಕವಿಲ್ಲ. ಹಾಗಾಗಿ ಅವನು ಶಿಖಾಸೂತ್ರಗಳನ್ನು ತ್ಯಜಿಸುತ್ತಾನೆ. ಗುರುಗೋವಿಂದ ಸಿಂಹರು ಕೇಶವನ್ನು ಇಡಲೇಬೇಕೆಂದಾಗ ಭಾರತೀಯ ಆಧ್ಯಾತ್ಮಿಕ ಪರಂಪರೆ, ಋಷಿಮುನಿ ಸಂಪ್ರದಾಯ, ಭಾರತೀಯ ಸಂಸ್ಕೃತಿ—ಇವುಗಳೊಂದಿಗೆ ಸಂಬಂಧ ಸ್ಥಾಯೀ ಆಗಿರುವಂತೆ ಆದೇಶಿಸಿದರು. ಕೇಶದ ಮತ್ತೊಂದು ಮಹತ್ತ್ವ ಸೌಂದರ್ಯ.

ಎರಡನೆಯ "ಕ"ಕಾರ ಕರ್ಹಾ. ಕರ್ಹಾ ಎಂದರೆ ಬಳೆ—ಕಂಕಣ. ಖಾಲ್ಸಾ ಪಂಥಿ ಒಂದು ವ್ರತಧಾರಿ. ಅವನ ಜೀವನದಲ್ಲಿ ಒಂದು ಮಹತ್ತರ ಕರ್ತವ್ಯವಿದೆ. ಈ ಕರ್ತವ್ಯವನ್ನು ಅವನಿಗೆ ಸದಾ ನೆನಪು ಮಾಡಿಕೊಳ್ಳಲೆಂದು ಈ ಬಳೆ. ಅವನು ಕೆಲಸ ಮಾಡಲು, ಜೀವನದ ಉದ್ದೇಶ ಪೂರ್ಣಗೊಳಿಸಲು ಕಂಕಣಬದ್ಧ.

ಮೂರನೆಯ "ಕ"ಕಾರ ಕಚ್ಛ. ಪ್ರತಿಯೊಬ್ಬ ಸಿಖ್ ಚಿಕ್ಕದೊಂದು ಅಂತರ್ವಸ್ತ್ರ (ಚಡ್ಡಿ) ಧರಿಸಬೇಕು. ಇದರ ಅರ್ಥವೇನು? ಪವಿತ್ರತೆಯ ಸಂಕೇತವಿದು. ಖಾಲ್ಸಾ ಪಂಥೀಯರು ಸಂನ್ಯಾಸಿಗಳಲ್ಲ. ಆದರೂ ಮಹತ್ತಾದ ಉದ್ದೇಶ ಸಾಧನೆ ಮಾಡಲು ಬ್ರಹ್ಮಚರ್ಯ ಪಾಲನೆ ಆವಶ್ಯಕ. ಹಾಗಾಗಿ ಈ ನಿಯಮ.

ನಾಲ್ಕನೇ "ಕ"ಕಾರ ಕೃಪಾಣ. ಕೃಪಾಣವೆಂದರೆ ಚಿಕ್ಕದೊಂದು ಕತ್ತಿ. ಹಿಂದೆ ಶತ್ರುಗಳ ಆಕ್ರಮಣದಿಂದ ತನ್ನನ್ನೂ ತನ್ನ ಒಡನಾಡಿಗಳನ್ನೂ ರಕ್ಷಿಸಿಕೊಳ್ಳಲೆಂದು ಗುರುಗೋವಿಂದ ಸಿಂಹರು ಈ ನಿಯಮ ಮಾಡಿದರು. ಆದರೆ ಇಂದು ಶತ್ರುಗಳಾರು? ಕತ್ತಿ ಸಾಂಕೇತಿಕ. ನಮ್ಮ ಆಧ್ಯಾತ್ಮಿಕ ಪ್ರಗತಿಯ ಪಥದಲ್ಲಿ ಹಲವಾರು ಶತ್ರುಗಳು—ಕಾಮ, ಕ್ರೋಧ, ಲೋಭ ಇತ್ಯಾದಿ. ಅವುಗಳ ವಿರುದ್ಧ ಸದಾ ಜಾಗರೂಕರಾಗಿರಲೆಂದು ಕತ್ತಿಯ ವ್ಯವಹಾರ.

ಐದನೆಯ "ಕ"ಕಾರ ಕಂಗ. ಕಂಗ ಎಂದರೆ ಚಿಕ್ಕ ಬಾಚಣಿಗೆ. ತಲೆಯ ಕೂದಲಿನಲ್ಲಿ ಕೊಳೆ ಸೇರದಂತೆ ಅದನ್ನು ಶುದ್ಧವಾಗಿಡಲೆಂದೂ ಕೇಶವನ್ನು ವ್ಯವಸ್ಥಿತವಾಗಿ ಇರಿಸಲೆಂದೂ ಬಾಚಣಿಗೆಯ ಉಪಯೋಗ. ಆದರೆ ಆಧ್ಯಾತ್ಮಿಕ ದೃಷ್ಟಿಯಿಂದ ಈ ಬಾಚಣಿಗೆಯ ಮಹತ್ತ್ವ ಅನೇಕ. ನಾವು ಹಿಂದೆಯೇ ಹೇಳಿದೆವು—ಕೇಶದ ಅರ್ಥ ಆಧ್ಯಾತ್ಮಿಕ ಪರಂಪರೆಯೆಂದು. ಈ ಆಧ್ಯಾತ್ಮಿಕ ಪರಂಪರೆಯಲ್ಲಿ, ಸಂಸ್ಕೃತಿಯ ಮಹಾಸ್ರೋತದಲ್ಲಿ ವಿಘ್ನಗಳು, ಕೊಳೆ, ಸೇರದಿರಲೆಂದು ಎಚ್ಚರವಹಿಸಬೇಕು. ನಾನಾ ಕಾರಣಗಳಿಂದಾಗಿ ಶತಶತಮಾನಗಳ ಈ ಸಮೃದ್ಧ ಸಂಸ್ಕೃತಿಯಲ್ಲಿ ಕಶ್ಮಲ ನುಗ್ಗಬಹುದು. ಹಾಗಾಗದಂತೆ ಎಚ್ಚರ ವಹಿಸಬೇಕು. ಅಷ್ಟೇ ಅಲ್ಲ. ಸಂಸ್ಕೃತಿಯಲ್ಲಿರುವ ಸದ್ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಯಾವ ವಿಚಾರಗಳು ಅನಾವಶ್ಯವೋ ಅವುಗಳನ್ನು ತ್ಯಜಿಸಬೇಕು. ಇದೇ ಬಾಚಣಿಗೆಯ ಸಂಕೇತದ ಮರ್ಮ. ಬಾಚಣಿಗೆಯಿಂದ ಕೇಶಾಲಂಕಾರ ಮಾಡಿಕೊಂಡರೆ ಹೇಗೆ ಸೌಂದರ್ಯ ವರ್ಧಿಸುವುದೋ, ಹೇಗೆ ವ್ಯಕ್ತಿತ್ವ ವರ್ಧಿಸುವುದೋ, ಹಾಗೆಯೇ ನಮ್ಮ ಆಧ್ಯಾತ್ಮಿಕ ಪರಂಪರೆಯ ಕೆಲವೊಂದು ನ್ಯೂನತೆಗಳನ್ನು ನಮ್ಮ ಪ್ರಯತ್ನದಿಂದ ತೆಗೆದೆಸೆದು ಅದರ ಸೌಂದರ್ಯ ವರ್ಧನೆ ಮಾಡಬೇಕು.

### ಖಾಲ್ಸಾದ ಆಧ್ಯಾತ್ಮಿಕ ಅರ್ಥ

ಖಾಲ್ಸಾ ಎಂದರೆ ಬರಿಯ ಕೇಶಬಿಡುವ, ಕೈಬಳೆ ತೊಡುವ, ತಲೆಗೆ ಪೇಟಕಟ್ಟಿ ತಿರುಗುವ ವ್ಯವಸ್ಥೆಯಲ್ಲ. ಇಂತಹ ವ್ಯವಸ್ಥೆ ಮಾಡಲು ಧರ್ಮಗುರುವಿನ ಆವಶ್ಯಕತೆಯಿಲ್ಲ. ಒಬ್ಬ ಸಾಧಾರಣ ರಾಜ ಆದೇಶ ಮಾಡಿದರೂ ಜನ ಪಾಲಿಸುತ್ತಾರೆ. ಆದರೆ ಖಾಲ್ಸಾದ ಶಾರೀರಿಕ ಸಂಕೇತಗಳ ಹಿಂದೆ ಆಧ್ಯಾತ್ಮಿಕ ತಾತ್ಪರ್ಯವಿದೆ. ಆ ಆಧ್ಯಾತ್ಮಿಕ ತಾತ್ಪರ್ಯದ ಉದ್ದೇಶ ನಮ್ಮಲ್ಲಿನ ಪ್ರತಿಯೊಬ್ಬರಲ್ಲೂ ಇರುವ ಆಧ್ಯಾತ್ಮಿಕತೆಯನ್ನು ವ್ಯಕ್ತಗೊಳಿಸುವುದು, ಪರಿಪೂರ್ಣರಾಗುವುದು. ಈ ಪರಿಪೂರ್ಣತೆಗೆ ಬ್ರಹ್ಮಚರ್ಯದ, ನಿಯಮ ಬದ್ಧತೆಯ, ಸಂಸ್ಕೃತಿಯ ಗರಿಮೆಯ ಅರಿವಿನ, ಬಾಧೆಗಳ ನಿವಾರಣೆಯ ಆವಶ್ಯಕತೆ ಇದ್ದೇ ಇದೆ. ಇದನ್ನೇ ಖಾಲ್ಸಾ ಹೇಳಿಕೊಡುವುದು.

ಒಂದು ದುಃಖದ ಸಂಗತಿ ಎಂದರೆ ಖಾಲ್ಸಾದ ಸೀಮಿತ ಪ್ರಭಾವ. ಮುನ್ನೂರು ವರ್ಷಗಳ ನಂತರ ಈ ವಿಶ್ವವ್ಯಾಪಿಯಾದ, ವಿಶಾಲವಾದ ಧ್ಯೇಯ ಮತ್ತೊಂದು ಜಾತಿಯಾಗಿ ಪರಿಣಮಿಸಿದೆ. ಇದಕ್ಕೆ ಕಾರಣವೇನು? ಒಂದು, ನಾವು ಮಾನವರು. ಎಂತಹುದೇ ವಿಶಾಲ ಧ್ಯೇಯವಿರಲಿ, ನಾವು ಮೊದಲು ಅದನ್ನು ನಮ್ಮ ಮನಸ್ಸಿನಿಂದ ಅಳೆಯಲು ಹೋಗಿ ಸಂಕೀರ್ಣಗೊಳಿಸುತ್ತೇವೆ. ಇದೇ ನಮ್ಮ ನ್ಯೂನತೆ. ಖಾಲ್ಸಾದಿಂದ ಆದ ಉಪಕಾರಗಳು ಬಹಳಷ್ಟು. ಮುಸ್ಲಿಂ ಶಾಸಕರ ದೌರ್ಜನ್ಯವನ್ನು ತಡೆಯುವುದರಲ್ಲಿ, ಭಾರತದ ಅಂತಃಸತ್ವವನ್ನು ಕಾಪಾಡಿಕೊಳ್ಳುವುದರಲ್ಲಿ ಖಾಲ್ಸಾದ ಕೊಡುಗೆ ಅಪಾರವಾದುದು.

ಇಂದು ಖಾಲ್ಸಾವನ್ನು ಆಧ್ಯಾತ್ಮಿಕ ದೃಷ್ಟಿಕೋನದಿಂದ ನೋಡಬೇಕಾದ ಸಮಯ ಬಂದಿದೆ. ಆಧ್ಯಾತ್ಮಿಕವಲ್ಲದ ಯಾವ ವ್ಯವಸ್ಥೆಯೂ ಚಿರಸ್ಥಾಯಿಯಲ್ಲ. ಹಾಗೂ ಆಧ್ಯಾತ್ಮಿಕವಲ್ಲದ ಯಾವುದೇ ಸಮಸ್ಯಾಪರಿಹಾರವೂ ಶಾಶ್ವತವಲ್ಲ. ಪ್ರತಿಯೊಂದು ಸಮಸ್ಯೆಗೂ ಆಧ್ಯಾತ್ಮಿಕ ಉತ್ತರವಿದೆ. ಆಧ್ಯಾತ್ಮಿಕ ಉತ್ತರವೇ ಸರಿಯಾದ ಉತ್ತರ. ಇದನ್ನೇ ಸ್ವಾಮಿ ವಿವೇಕಾನಂದರು ಹೇಳಿದುದು. ಭಾರತವು ವಿಶ್ವಜಯಿಯಾಗುತ್ತದೆ ಎಂದರವರು. ಹೇಗೆ? ಶಾರೀರಿಕ ಬಲದಿಂದಲ್ಲ, ಆದರೆ ಆಧ್ಯಾತ್ಮಿಕ ಬಲದಿಂದ. ಈ ಆಧ್ಯಾತ್ಮಿಕ ಬಲದ ಜಾಗರಣೆಗಾಗಿಯೇ ಶಾರೀರಿಕ ಹಾಗೂ ಮಾನಸಿಕ ಬಲಗಳ ಆವಶ್ಯಕತೆ.

### ವಿವೇಕಾನಂದರ ದೃಷ್ಟಿ

ಗುರುಗೋವಿಂದ ಸಿಂಹರನ್ನು ವಿವೇಕಾನಂದರು ಅತ್ಯಂತ ಶ್ರದ್ಧೆಯಿಂದ ನೋಡುತ್ತಿದ್ದರು. ಲಾಹೋರಿನಲ್ಲಿ ನೀಡಿದ ಅದ್ಭುತವಾದ ತಮ್ಮ ಭಾಷಣದಲ್ಲಿ ಸ್ವಾಮೀಜಿ ಗುರುಗೋವಿಂದ ಸಿಂಹರ ಬಲಿದಾನ ಮತ್ತು ತ್ಯಾಗಗಳನ್ನು ಬಹಳ ಪ್ರಶಂಸಿಸಿದರು. ತಮ್ಮ ಎರಡು ಪುಟ್ಟ ಮಕ್ಕಳನ್ನು ಜೀವಂತ ಸಮಾಧಿ ಮಾಡಿದ ಮುಸ್ಲಿಂ ರಾಜ. ಗುರುಗೋವಿಂದ ಸಿಂಹರು ಆಗ ಅಳುತ್ತಾ ಕುಳಿತಿರಲಿಲ್ಲ. ಅವರ ಹಿತೈಷಿಗಳೇ ದ್ರೋಹ ಬಗೆದರು. ಆಗಲೂ ಅವರು ಅಳುತ್ತಾ ಕುಳಿತಿರಲಿಲ್ಲ. ಈ ವೀರಾಗ್ರಣಿ ಸಿಂಹದಂತೆ ಹೋರಾಡಿ ಮಡಿದರು. ಅವರ ತ್ಯಾಗ ಕೇವಲ ದೇಶಕ್ಕಾಗಿ ಅಲ್ಲ, ಸಾಮ್ರಾಜ್ಯಕ್ಕಾಗಿ ಅಲ್ಲ. ಅವರ ತ್ಯಾಗ ಆಧ್ಯಾತ್ಮಿಕತೆಗಾಗಿ.

ಈ ತ್ಯಾಗದ ತಳಹದಿಯನ್ನೇ ಮತ್ತೊಂದು ರೂಪದಲ್ಲಿ ಜಗತ್ತಿನ ಮುಂದಿಟ್ಟರು ವಿವೇಕಾನಂದರು. ಅವರು ಖಡ್ಗ ಹಿಡಿಯಲು ಉಪದೇಶಿಸಲಿಲ್ಲ, ಯುದ್ಧ ಮಾಡಲು ಹೇಳಲಿಲ್ಲ. ಆದರೆ ಅದೇ ಕ್ಷಾತ್ರವೀರ್ಯವನ್ನೂ ಬ್ರಹ್ಮತೇಜವನ್ನೂ ಸಮಾಜ ನಿರ್ಮಾಣಕ್ಕಾಗಿ ಬಳಸಿಕೊಳ್ಳಲು ಕರೆನೀಡಿದರು. ಸ್ವಾಮೀಜಿಯವರ ಸಮಯದಲ್ಲಿಯೂ ಭಾರತ ಪರಾಧೀನವಾಗಿತ್ತು. ಆದರೆ ಸ್ವಾಮೀಜಿಯವರ ಕಾರ್ಯವಿಧಾನ ಬೇರೆ, ಗುರುಗೋವಿಂದ ಸಿಂಹರ ಕಾರ್ಯವಿಧಾನ ಬೇರೆ. ಮುನ್ನೂರು ವರುಷಗಳ ಹಿಂದಿನ ಪರಿಸ್ಥಿತಿಯಲ್ಲಿ ಗೋವಿಂದ ಸಿಂಹರ ವಿಧಾನ ಸರಿಯಾಗಿದ್ದಿರಬಹುದು ಅಥವಾ ಅಲ್ಲದಿರಬಹುದು. ಆದರೆ ಇಂದಿನ ಮುಂದಿನ ಪರಿಸ್ಥಿತಿಯಲ್ಲಿ ವಿಶ್ವವನ್ನೇ ಜಯಿಸಬೇಕಾದರೆ ಸ್ವಾಮಿ ವಿವೇಕಾನಂದರ ಮಾರ್ಗವೇ ಪ್ರಶಸ್ತವಾದುದು.

ಏನು ಅವರ ಮಾರ್ಗ? "ವಿಶ್ವವನ್ನು ಜಯಿಸಬೇಕಾದರೆ ನಿನ್ನನ್ನು ನೀನು ಜಯಿಸು" ಎಂದರು. ನಮ್ಮನ್ನು ನಾವು ಜಯಿಸಬೇಕಾದರೆ ಈಗ ಕೇಶದ, ಅಂದರೆ ಪುರಾತನ ಸಂಸ್ಕೃತಿಯಲ್ಲಿ ಶ್ರದ್ಧೆಯ ಆವಶ್ಯಕತೆಯಿದೆ. ನಮ್ಮ ಅಂತಃಶತ್ರುಗಳೊಂದಿಗೆ ಹೋರಾಡಲು ಕತ್ತಿಯ ಆವಶ್ಯಕತೆಯಿದೆ. ಬ್ರಹ್ಮಚರ್ಯದ ಬಲದ ಅವಶ್ಯಕತೆಯಿದೆ. ಇವುಗಳೆಲ್ಲದರ ಜೊತೆಗೆ ಮತ್ತೊಂದು "ಕ"ಕಾರದ ಆವಶ್ಯಕತೆಯಿದೆ. ಅದೇ ಕರ್ಮಯೋಗ. ನಿಃಸ್ವಾರ್ಥದಿಂದ ಪರರನ್ನು ನಮ್ಮಂತೆ ಬಗೆದು, ಅಥವಾ ಎಲ್ಲರನ್ನೂ ಭಗವಂತನೆಂದೇ ಅರಿತು ಸೇವೆ ಮಾಡುವ ಆವಶ್ಯಕತೆಯಿದೆ. ಇದೇ ರಾಜ ಮಾರ್ಗ.

ಗುರುಗೋವಿಂದಸಿಂಹ ಯುದ್ಧದಿಂದ ಹಿಂತಿರುಗಿ ಅರಮನೆಯನ್ನು ಪ್ರವೇಶಿಸಿದಾಗ ಅವರ ಪತ್ನಿ ಎದುರಾದಳು. ಜಯಗಳಿಸಿಕೊಂಡುಬಂದ ಪತಿಯನ್ನು ಆದರದಿಂದ ಬರಮಾಡಿಕೊಳ್ಳುವ ಸಂಭ್ರಮ ಆಕೆಯದು. ಆದರೆ ಪತಿಯನ್ನು ನೋಡಿದಾಗ ಅವಳು ದಿಗ್ಭ್ರಾಂತಳಾದಳು. ಅವರ ಪಕ್ಕದಲ್ಲಿ ಪುತ್ರರಿಬ್ಬರು ಇರಲಿಲ್ಲ. ಪ್ರಶ್ನಾರ್ಥಕ ದೃಷ್ಟಿಯಿಂದ ಪತಿಯನ್ನು ನೋಡಿದಳು. ಗುರುಗೋವಿಂದರು ತಲೆ ತಗ್ಗಿಸಿದರು. ಆಗ ಪತ್ನಿಗೆ ಅರ್ಥವಾಯಿತು. ಆಕೆ ಗಳಗಳನೆ ಕಣ್ಣೀರು ಸುರಿಸತೊಡಗಿದಳು. ಗುರುಗೋವಿಂದರು ತಲೆ ಎತ್ತಿ ನೋಡಿದರು. ಆಕೆಯ ದುಃಖವನ್ನು ನೋಡಿ ಅವರ ದುಃಖ ಇನ್ನೂ ಅಧಿಕವಾಗಿ, ಅವರ ಕಣ್ಣುಗಳಿಂಲೂ ಧಾರಾಕಾರವಾಗಿ ನೀರು ಸುರಿಯತೊಡಗಿತು. ಆದರೆ ಕಾರಣ ಬೇರೆ. ಅವರು ಪತ್ನಿಯನ್ನು ಕುರಿತು ಹೇಳಿದರು "ನೀನು ವೀರಮಾತೆ ಎಂದುಕೊಂಡಿದ್ದೆ. ನೀನು ಕೇವಲ ನಿನ್ನ ಇಬ್ಬರು ಮಕ್ಕಳ ಮೃತ್ಯುವಿಗಾಗಿ ಕಣ್ಣೀರು ಸುರಿಸುತ್ತಿರುವೆ. ಆದರೆ ಸಾವಿರಾರು ಯೋಧರು ಯುದ್ಧದಲ್ಲಿ ಮಡಿದರಲ್ಲ, ಅವರಾರು? ಅವರೂ ನಮ್ಮ ಮಕ್ಕಳಲ್ಲವೆ? ಅವರಿಗಾಗಿ ನಾವು ರೋದಿಸಬೇಡವೆ?"